ಚಾಮರಾಜನಗರ ಜಿಲ್ಲೆಯಲ್ಲಿ ಹೊಸದಾಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ

2942(2891) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಹಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ ತಾಲ್ಲೂಕು ಸಂತೆಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ಚಂದಕವಾಡಿ ಹೋಬಳಿಯಲ್ಲಿ ಸರ್ಕಾರ ಹಾಗೂ ಖಾಸಗಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು: ಅವುಗಳು ಯಾವುವು:

ಆ) ಶಾಲೆಗಳನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು: ವರ್ಗವಾರು ವಿವರಗಳನ್ನು ನೀಡುವುದು:

ಇ) ಚಂದಕವಾಡಿ ಹೋಬಳಿ ವ್ಯಾಪ್ತಿಯಲ್ಲಿ ಯಾವುದಾದರೂ ಸರ್ಕಾರಿ/ಖಾಸಗಿ ಪ.ಪೂ. ಕಾಲೇಜು ಇದೇಯೇ? ಇಲ್ಲದಿದ್ದಲ್ಲಿ ಮೇಲ್ಕಂಡ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ.ಪೂ. ಕಾಲೇಜು ಅವಶ್ಯಕವಲ್ಲವೇ? ಅವಶ್ಯಕವಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ–02

ಖಾಸಗಿ ಪ್ರೌಢಶಾಲೆಗಳ ಸಂಖ್ಯೆ–02

ಸರ್ಕಾರಿ ಶಾಲೆಗಳು:

1) ಸರ್ಕಾರಿ ಪ್ರೌಢಶಾಲೆ ಚಂದಕವಾಡಿ

2) ಸರ್ಕಾರಿ ಪ್ರೌಢಶಾಲೆ ಆಲೂರು

ಖಾಸಗಿ ಶಾಲೆಗಳು:

1) ಟಿ. ಸುಬ್ಬಣ್ಣ ಖಾಸಗಿ ಅನುದಾನಿತ ಪ್ರೌಢಶಾಲೆ ಕಾಗಲವಾಡಿ

2) ಸಂತೆ ಫಿಲೋಮಿನಾ ಖಾಸಗಿ ಅನುದಾನ ರಹಿತ ಪ್ರೌಢಶಾಲೆ ನಾಗವಳ್ಳಿ

ಆ)

ಶಾಲೆಯ ಹೆಸರು	ವಿದ್ಯಾರ್ಥಿಗಳ ಸಂಖ್ಯೆ			ಒಟ್ಟು
	8	9	10	
1	2	3	4	
1. ಸರ್ಕಾರಿ ಪ್ರೌಢ ಶಾಲೆ ಚಂದಕವಾಡಿ	280	263	165	708
2. ಸರ್ಕಾರಿ ಪ್ರೌಢ ಶಾಲೆ ಆಲೂರು	223	163	103	489
3. ಟಿ. ಸುಬ್ಬಣ್ಣ ಖಾಸಗಿ ಅನುದಾನಿತ ಪ್ರೌಢ ಶಾಲೆ ಕಾಗಲವಾಡಿ	125	114	100	339
4. ಸಂತ ಫಿಲೋಮಿನಾ ಖಾಸಗಿ ಅನುದಾನ ರಹಿತ ಪ್ರೌಢಶಾಲೆ ನಾಗವಳ್ಳಿ	56	50	35	141

ಇ) ಚಾಮರಾಜನಗರ ಹಾಗೂ ತಾಲ್ಲೂಕಿನಲ್ಲಿ ಈ ಕೆಳಕಂಡ 6 ಪ.ಪೂ. ಕಾಲೇಜುಗಳು ನಡೆಯುತ್ತಿದ್ದು. ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

		ಪ್ರಥಮ ಪಿ.ಯು.	ದ್ವಿತೀಯ ಪಿ.ಯು
1.	ಸರ್ಕಾರಿ ಬಾಲಕರ ಪ.ಪೂ. ಕಾಲೇಜು, ಚಾಮರಾಜನಗರ	260	221
2.	ಎ.ಎಸ್.ಎಸ್. ವಿಭಜಿತ ಬಾಲಕಿಯರ ಪ.ಪೂ. ಕಾಲೇಜು ಚಾಮರಾಜನಗರ	275	236
3.	ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜು ಚಾಮರಾಜನಗರ	99	79
4.	ಸರ್ಕಾರಿ ಪ.ಪೂ ಕಾಲೇಜು ಹರವೆ ಚಾಮರಾಜನಗರ ತಾ.	131	68
5.	ಸರ್ಕಾರಿ ಪ.ಪೂ ಕಾಲೇಜು, ವೆಂಕಟಯ್ಯನ ಛತ್ರ, ಚಾಮರಾಜನಗರ	79	43
6.	ಸರ್ಕಾರಿ ಎಂ ಸಂಘ ಶೆಟ್ಟ ಪ:ಪೂ ಕಾಲೇಜು ಕುಬೇರು, ಚಾಮರಾಜನಗರ	154	95

ಕ್ರಮ ಸಂ: 3 ಮತ್ತು 5ರ ಎರಡು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಕಡಿಮೆಯಿರುತ್ತದೆ. ಇವುಗಳ ಜೊತೆಗೆ ಮತ್ತೊಂದು ಪ.ಪೂ ಕಾಲೇಜನ್ನು ನೀಡಿದರೆ ಹಾಲಿ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಇರುವ ಕಾಲೇಜನ್ನು ಮುಚ್ಚುವ ಪರಿಸ್ಥಿತಿ ಉದ್ಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಚಂದಕವಾಡಿ ಹೋಬಳಿಯಲ್ಲಿ ಸರ್ಕಾರಿ ಪ.ಪೂ ಕಾಲೇಜನ್ನು ಪ್ರಾರಂಭಿಸುವ ಅವಶ್ಯಕತೆ ಇರುವುದಿಲ್ಲ.

ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯ ಸಾಮೂಹಿಕ ಆರೋಗ್ಯ ಕೇಂದ್ರಗಳ ಮಂಜೂರಾತಿಯ ಬಗ್ಗೆ

2943(2893) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಮೈಸೂರು ವ್ಯಾಪ್ತಿಯಲ್ಲಿ ಎಷ್ಟು ಸಾಮೂಹಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ; ಇವುಗಳನ್ನು ಯಾವ ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗಿದೆ; ಕ್ಷೇತ್ರವಾರು ವಿವರಗಳನ್ನು ನೀಡುವುದು;

ಆ) ಈ ಸಾಲಿನಲ್ಲಿ ಮಂಜೂರು ಮಾಡಲು ಉದ್ದೇಶಿಸಿರುವ ಸಾಮೂಹಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; ಇವುಗಳನ್ನು ಎಲ್ಲೆಲ್ಲಿಗೆ ಮಂಜೂರು ಮಾಡಲು ಉದ್ದೇಶಿಸಲಾಗಿದೆ; ಕ್ಷೇತ್ರವಾರು ವಿವರಗಳನ್ನು ನೀಡುವುದು;

ಇ) ಹಾಲಿ ಆರಂಭಗೊಂಡಿರುವ ಸಾಮೂಹಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು; ಇವುಗಳನ್ನು ಎಷ್ಟು ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ; ಇನ್ನೂ ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡ ಮಂಜೂರು ಮಾಡಲಾಗಿದೆ; ಕ್ಷೇತ್ರವಾರು ವಿವರಗಳನ್ನು ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಜಿಲ್ಲೆಗೆ 2 ಸಮುದಾಯ ಆರೋಗ್ಯ ಕೇಂದ್ರಗಳು ಮಂಜೂರು ಮಾಡಲಾಗಿದೆ.

1) ಯಳಂದೂರು, ಸಂತೆಮರಹಳ್ಳಿ ಕ್ಷೇತ್ರ

2) ಕಬ್ಬಳ್ಳಿ, ಗುಂಡ್ಲುಪೇಟೆ ಕ್ಷೇತ್ರ.

ಮೈಸೂರು ಜಿಲ್ಲೆಗೆ 8 ಸಮುದಾಯ ಆರೋಗ್ಯ ಕೇಂದ್ರಗಳು ಮಂಜೂರಾಗಿವೆ.